(ಆ) ಚುಕ್ಕೆಗುರುತಿಲ್ಲದ ಪ್ರಶ್ನೋತ್ತರಗಳು

ಪರುಸಂಗೋಪನಾ ಫಾರ್ಮ್ ಅನಧಿಕೃತ ಒತ್ತುವರಿ

1894 (2242) ಶ್ರೀ ಅಂಗಾರ ಎಸ್. (ಸುಳ್ಯ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೊಳಪಟ್ಟ ಪುತ್ತೂರು ತಾಲ್ಲೂಕಿನ ಕೊಯಿಲ ಕೆ.ಸಿ.ಫಾರ್ಮಗೆ ಕಾದಿರಿಸಲಾದ ಸ್ಥಳದಲ್ಲಿ ಅನಧಿಕೃತವಾಗಿ ಕಳೆದ 30 ವರ್ಷಗಳಿಂದ ಕೃಷಿಯನ್ನು ಮಾಡಿಕೊಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸದರಿಯವರು ಸ್ವಾಧೀನ ಮಾಡಿಕೊಂಡು ಕೈತುವಳಿ ಮಾಡಿರುವ ಸ್ಥಳವನ್ನು ಸದರಿಯವರಿಗೆ ಸಕ್ರಮಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ವಿವರ ನೀಡುವುದು;

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು.

ಆ) ಅಕ್ರಮಿತ ಜಮೀನು ಕ್ಯೂಲ ಜಾನುವಾರು ಮತ್ತು ಸಂವರ್ಧನಾ ತರಬೇತಿ ಕೇಂದ್ರಕ್ಕೆ ಕಾಯ್ದಿರಿಸಿದ ಜಮೀನಾಗಿರುತ್ತದೆ. ಯಾವುದೇ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಲಾದ ಜಮೀನಿನ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966ರ ನಿಯಮ 18 (ಐ) ಅನ್ವಯ ಅವಕಾಶವಿರುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಮರಗಳ ಲೂಟಿ

1897 (2332) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರಪೇಟೆ) ಮಾನ್ಯ ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಕೋಪಟ್ಟಿಗ್ರಾಮ, ಶಾಂತಳ್ಳಿಯ ಕುಮಾರಳ್ಳಿ ಮತ್ತು ಮೊಣ್ಣಂಗೇರಿಯಲ್ಲಿ ಮರಗಳ ಲೂಟಿಯಾಗಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಈ ಲೂಟಿಯಲ್ಲಿ ಒಳಗೊಂಡಿರುವವರು ಯಾರು ಹಾಗೂ ಅವರಿಂದ ವಸೂಲಿ ಮಾಡಲಾಗಿರುವ ಹಣವೆಷ್ಟು? ವಿವರ ಒದಗಿಸುವುದು.

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) 1. ಕೋಪಟ್ಟಿ ಗ್ರಾಮ

ಈ ಪ್ರಕರಣದಲ್ಲಿ ಅಪರಾಧಿಯಾದ ಶ್ರೀಮತಿ ಡೈಸಿ ಜಾಕೋಬ್‌ರವರಿಂದ ಅಕ್ರಮವಾಗಿ ಕಡಿದ ಮದರ ಮೌಲ್ಯವನ್ನು ವಸೂಲು ಮಾಡುವ ಬಗ್ಗೆ ಸಿವಿಲ್ ದಾವೆ ಹೂಡಲಾಗಿದ್ದು ವಿಚಾರಣಾ ಹಂತದಲ್ಲಿದೆ. ಅರಣ್ಯ ಅತಿಕ್ರಮಣ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದ್ದು ಇದನ್ನು ಪ್ರಶ್ನಿಸಿ ಶ್ರೀಮತಿ ಡೈಸಿ ಜಾಕೋಬ್‌ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಅದರ ಆದೇಶ ಬಾಕಿ ಇದೆ.

2. ಕುಮಾರಳ್ಳಿ ಗ್ರಾಮ

ಈ ಪ್ರಕರಣದಲ್ಲಿ ಖಾತೆದಾರರಾದ ಶ್ರೀ ಹೆಚ್.ಸಿ.ಬಾಬುರಾಜೇಂದ್ರ ಇವರಿಂದ ಅನಧಿಕೃತವಾಗಿ ಕಡಿದ ಮರದ ಮೌಲ್ಯವನ್ನು ವಸೂಲು ಮಾಡಲಾಗಿದೆ. ಇದಲ್ಲದೆ ಅಕ್ರಮವಾಗಿ